ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆಕಾಶವಾಣಿ ಮೂಲಕ ಪ್ರಚಾರ ಮಾಡುತ್ತಿದ್ದೇವೆ, ತಿಳುವಳಿಕೆ ನೀಡುತ್ತಿದ್ದೇವೆಂದು ನೀವುಹೇಳುತ್ತಿದ್ದೀರಿ. ಬರೀ ಪ್ರಚಾರ ಮಾಡಿದರೆ, ತಿಳಿವಳಿಕೆ ನೀಡಿದರೆ ಹುಳುಗಳು ಸಾಯುತ್ತವೆಯೇ? ರೈತರು ಉದ್ದಾವಾಗುತ್ತಾರೆಯೇ? ನೀವು ಅಧಿಕಾರ ವಿಕೇಂದ್ರೀಕರಣ ಮಾಡಿದಂತೆ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಹಣವನ್ನು ಮಾಡುತ್ತಿದ್ದೀರಾ? ಜಿಲ್ಲಾ ಪರಿಷತ್ತಿನವರಿಗೆ ಒಂದು ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಜಿಲ್ಲಾ ಪರಿಷತ್ತಿನವರಿಗೆ ಈ ಮೂರು ಇಲಾಖೆಗಳಿಗೆ ಸಂಬಂಧ ಪಟ್ಟ ಹಾಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಟ್ಟು ಇದನ್ನು ಕಾರ್ಯಗತ ಮಾಡಿ ಎಂದು ಬರೆಯುತ್ತೇನೆ.

ಶಾಲೆಯ ಪಠ್ಯಪುಸ್ತಕದಲ್ಲಿ ತಪ್ಪು ಮಾಹಿತಿ ಮುದ್ರಿಸಿರುವುದು

೫೦೯. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ),— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಪಠ್ಯ ಪುಸ್ತಕವಾದ ಕನ್ನಡ ಮಾಧ್ಯಮ ೫ನೇ ತರಗತಿಯ ಸಮಾಜ ಪುಸ್ತಕದ ಪೌರನೀತಿ ವಿಭಾಗದಲ್ಲಿ ವಿಧಾನ ಸಭೆಯ ಸದಸ್ಯರುಗಳ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳ ಸಂಖ್ಯೆಯನ್ನು ಮತ್ತು ರಾಜ್ಯಗಳ ಹಾಗೂ ಕೇಂದ್ರಾಡಳಿತಗಳ ಸಂಖ್ಯೆಯನ್ನು ತಪ್ಪಾಗಿ ಮುದ್ರಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಕೂಡಲೇ ಈ ಪುಸ್ತಕದಲ್ಲಿರತಕ್ಕ ಎಲ್ಲಾ ಲೋಪದೋಷಗಳನ್ನು ಸರಪಡಿಸಿ ಸರಿಯಾದ ಮಾಹಿತಿಯನ್ನು ಎಲ್ಲಾ ಶಾಲೆಗಳಿಗೂ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಇ) ರೀತಿ ತಪ್ಪು ಮಾಹಿತಿಗಳನ್ನು ಮುದ್ರಿಸಲು ಕಾರಣರಾದವರ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು). —

ಅ) ಹೌದು.

ಆ) ಕೈಗೊಳ್ಳಲಾಗುವುದು.

ಇ) ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.— ಮಾನ್ಯ ಅಧ್ಯಕ್ಷರೆ, ಪಠ್ಯ ಪುಸ್ತಕದಲ್ಲಿ ತಪ್ಪಾಗಿ ಮುದ್ರಿತವಾಗಿದೆ. ಆದ್ದರಿಂದ ಈ ವರ್ಷ ವಿದ್ಯಾರ್ಥಿಗಳು ತಪ್ಪಾಗಿ ಉತ್ತರ ಬರೆದಿದ್ದರೆ ಅವರಿಗೆ ಮಾರ್ಕ್ಸ್ ಕೊಡಬೇಕು ಎಂದು ಮಾನ್ಯ ವಿದ್ಯಾ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ತರಹ ಸಂಕ್ಷಿಪ್ತವಾಗಿ ಕೇಳಬೇಕು.

ಶ್ರೀ ಎಂ. ಚಂದ್ರಶೇಖರ್.— ಅಧ್ಯಕ್ಷರೇ, ಇದರಲ್ಲಿ ಕೆಲವು ತಪ್ಪು ಮಾಹಿತಿಗಳಿರುವುದು ನಿಜ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಎಷ್ಟಿದ್ದಾರೆ, ರಾಜ್ಯಗಳು ಎಷ್ಟಿವೆ ಎಂಬ ಬಗ್ಗೆ ಕೊಟ್ಟಿರುವ ಅಂಕಿಅಂಶಗಳು ತಪ್ಪಾಗಿವೆ. ಅದನ್ನು ತಿದ್ದುತ್ತೇವೆ. ಅದನ್ನು ಡ್ರಾಫ್ಟ್ ಸ್ಟೇಜ್‌ನಲ್ಲೇ ತಿದ್ದಿದ್ದಿವ ಕೆಲಸವನ್ನು ಮಾಡಿಲ್ಲವಲ್ಲ ಎಂದು ಆಶ್ಚರ್ಯವಾಗುತ್ತಿದೆ. ಆದ್ದರಿಂದ ಮುಂದಿನ ಇಲಾಖೆಯವರು ಅಥವಾ ಇದನ್ನು ಯಾರು ತಯಾರು ಮಾಡಿದ್ದಾರೆ, ಅವರ ಬಗ್ಗೆ ವಿಚಾರ ಮಾಡುತ್ತೇವೆ, ಮತ್ತು ತಪ್ಪನ್ನು ತಿದ್ದುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಯ ಶಿಕ್ಷಕರ ವರ್ಗಾವಣೆ

೫೨೪. ಶ್ರೀ ಆರ್ ಎನ್. ನಾಯ್ಕ (ಭಟ್ಕಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಂ. ಡಿಪಿಎಆರ್, ೯ ಎಸ್‌ಟಿಆರ್, ಬೆಂಗಳೂರು ೫ನೇ ಸೆಪ್ಟೆಂಬರ್ ೧೯೫೮ ಮತ್ತು ದಿನಾಂಕ ೨೫ನೇ ಮೇ ೧೯೮೮ ರಂತೆ ರಾಜ್ಯದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಹಾಗೂ ಪ್ರತಿ ನಿಯೋಜನೆಗೆ ಅನುಸರಿಸಬೇಕಾಗುತ್ತದೆಯೇ?